

# ಪತ್ರಿಕೆಗಳಿಂದ ಪ್ರಾಣಿಗಳು!

ಓದಿ ಮೂಲೆಗೆ ಎಸೆದ ವರ್ತಮಾನ ಪತ್ರಿಕೆಗಳನ್ನು ಮಾತ್ರ ಬಳಸಿ ವೈವಿಧ್ಯಮಯವಾದ ವನ್ಯ ಜೀವಿಗಳ ಅದ್ಭುತ ಕಲಾ ಸೃಷ್ಟಿ. ಸೊಂಡಿಲು ಮಡಚಿ ಮಲಗಿರುವ ಆನೆ, ಗಂಭೀರವಾಗಿ ತಲೆಯೆತ್ತಿ ನಡೆಯುವ ಘೇಂಡಾಮೃಗ, ಗಗನದಲ್ಲಿ ರೆಕ್ಕೆ ಬಿಚ್ಚಿ ಹಾರುತ್ತಿರುವ ಗರುಡ, ಕೆಂಪು ಮೂತಿಯ ಚಿಂಪಾಂಜಿಯ ಸಂಸಾರ ಎಲ್ಲವೂ ಕೇವಲ ವೃತ್ತ ಪತ್ರಿಕೆಗಳಿಂದಲೇ ಹುಟ್ಟು ಪಡೆದಿವೆ. ‘ಅಳಿಯುತ್ತಿರುವ ಜೀವ ಸಂತತಿಯನ್ನು ಉಳಿಸಿ’ ಎನ್ನುವ ಸಂದೇಶದ ಪ್ರಸಾರವೂ ಇದರ ಹಿಂದಿದೆ.

ಈ ವಿಶಿಷ್ಟ ಕಲೆಯನ್ನು ರೂಪಿಸಿದ ಯುವ ಕಲಾವಿದೆ 35ರ ಹರಯದ ಚೀ ಹಿಟೋಟ್ಸುಯಾಮಾ. 1982ರಲ್ಲಿ ಟೋಕಿಯೋದ ಶಿಜೋಕಾ ಎಂಬಲ್ಲಿ ಜನಿಸಿದ ಅವಳು ಡಿಸೈನಿಂಗ್ ಕಲೆಯಲ್ಲಿ ಪಾಲಿಟೆಕ್ನಿಕ್ ವಿಶ್ವವಿದ್ಯಾಲಯದಿಂದ ಡಿಪ್ಲೊಮಾ ಮಾಡಿದ್ದಾಳೆ.

ವೃತ್ತ ಪತ್ರಿಕೆಗಳ ಬಣ್ಣ ಬಣ್ಣದ ಚಿತ್ರಗಳಿರುವ ಪುಟಗಳನ್ನು ನೀರಿನಲ್ಲಿ ಅದ್ದಿ ಹಿಂಡಲಾಗುತ್ತದೆ. ಬಳಿಕ ಬೇಕಾದ ಪ್ರಾಣಿಯ ಚಿತ್ರವನ್ನು ಮುಂದಿಟ್ಟುಕೊಂಡು ಪತ್ರಿಕೆಯನ್ನು ಅದೇ ಆಕೃತಿಯಲ್ಲಿ ಒತ್ತಿ, ಮಡಚಿ, ತದ್ರೂಪವನ್ನು ಮೂಡಿಸುವುದು ಕೇವಲ ಕೈಗಳಿಂದ! ಅವುಗಳ ಮೈಯ ಉಬ್ಬು ತಗ್ಗುಗಳು, ಬಾಹ್ಯ ರೇಖೆಗಳು, ವಕ್ರಾಕೃತಿಗಳು ಹಾಗೂ ಕೂದಲುಗಳನ್ನು ನೈಜಗೊಳಿಸಲು ದಾರದಿಂದ ಒತ್ತಲಾಗುತ್ತದೆ. ಈ ಕೆಲಸ ಮಾಡಲು ಚೀಗೆ ಕಲಾವಿದರ ತಂಡವೇ ಜೊತೆಗಿದೆ.

ಅಳಿಯುತ್ತಿರುವ ಜೀವವರ್ಗವನ್ನೇ ಗುರಿಯಾಗಿರಿಸಿಕೊಂಡು ಆಮೆ, ರೈನೋಸಾರ್, ಸಮುದ್ರ ಸಿಂಹ, ನಾಯಿ, ಚಿರತೆ, ನರಿ, ಹಿಮದ ಕಪಿ, ಇಗ್ವಾನ ಸಸ್ಯವಾಸಿ ಉಡ ಇತ್ಯಾದಿ ಮೂವತ್ತಕ್ಕಿಂತ ಅಧಿಕ ಕೃತಿಗಳನ್ನು ಚೀ ಹೀಗೆ ರೂಪಿಸಿದ್ದಾರೆ

**■ ಪ. ರಾಮಕೃಷ್ಣ ಶಾಸ್ತ್ರಿ**



